**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 05-02-2024.**

**ಪಾಟೀ ಸವಾಲು - 2 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರಿಂದ :**

**1)** ವಾದಪತ್ರದಲ್ಲಿ ನಮೂದಿಸಿರುವ ಹೈಪಾಯಿಂಟ್ ವಿಳಾಸವು ನಮ್ಮ ಕಛೇರಿಯ ವಿಳಾಸವಾಗಿರುತ್ತದೆ. ನಾನು ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದು, ನಾನು ಪ್ರಾಪರ್ಟಿ ಬಿಸಿನೆಸ್ ಸಹ ಮಾಡಿರುತ್ತೇನೆ. ನಾನು ಬಹಳಷ್ಟು ಜಮೀನುಗಳನ್ನು ಖರೀದಿ ಮಾಡಿರುತ್ತೇನೆ. ನಾನು ಬೇರೆ ವ್ಯಕ್ತಿಗಳಿಗೆ ಮಾರಾಟ ಮಾಡಲು ಕರಾರು ಪತ್ರಗಳನ್ನೂ ಸಹ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಜಮೀನುಗಳನ್ನು ಖರೀದಿಸುವಾಗ ಎಷ್ಟು ಮ್ಯುಖಬೆಲೆಯ ಛಾಪಾ ಕಾಗದಗಳನ್ನು ಖರೀದಿಸುತ್ತೇನೆ ಎಂದು ಕೇಳಲು ಆ ಸಮಯದಲ್ಲಿ ಏನು ನಿಯಮ ಇದೆಯೋ ಅದರ ಪ್ರಕಾರ ಖರೀದಿಸುತ್ತೇನೆ. 2004 ನೇ ಇಸವಿಯಲ್ಲಿ ಕ್ರಯದ ಕರಾರು ಪತ್ರವನ್ನು ಮಾಡಿಕೊಳ್ಳುವಾಗ ಎಷ್ಟು ಬೆಲೆಯ ಸ್ಟಾಂಪ್ ಪೇಪರ್ ಅನ್ನು ಖರೀದಿಸಬೇಕು ಎಂದು ನನಗೆ ಆ ಸಮಯದಲ್ಲಿ ಗೊತ್ತಿತ್ತು, ಈಗ ನೆನಪಿಲ್ಲ. ನಿ.ಪಿ.1 ನ್ನು ಆರು ರೂಪಾಯಿ ಮುಖಬೆಲೆಯ ಸ್ಟಾಂಪ್ ಪೇಪರ್ ಮೇಲೆ ಬರೆಯಲಾಗಿದೆ. ನಾನು ಬಾಕಿ ಮುದ್ರಾಂಕ ಶುಲ್ಕ ಮತ್ತು ದಂಡವನ್ನು ಪಾವತಿಸಿರುತ್ತೇನೆ ಎಂದು ಸಾಕ್ಷಿಯು ಸ್ವತಃ ನುಡಿಯುತ್ತಾರೆ.

**2)** 1 ಮತ್ತು 2 ನೇ ಪ್ರತಿವಾದಿಗಳು ನನ್ನ ಪರಿಚಯಸ್ಥರಾಗಿರಲಿಲ್ಲ ಎಂದರೆ ಸರಿ. ಅವರ ಪರಿಚಯ ನನಗೆ ಸಾಕ್ಷಿದಾರರರಾದ ಮುನಿರಾಜು ಮತ್ತು ಅಶ್ವತ್ ನಾರಾಯಣ್ ಅವರ ಮೂಲಕ ಆಗಿರುತ್ತದೆ. ಮುನಿರಾಜು ಅವರು ಮೀನುಕುಂಟೆ ಹೊಸೂರು ನಿವಾಸಿ ಎಂದರೆ ಸರಿ. ಅಶ್ವತ್ ನಾರಾಯಣ್ ಅವರು ಮಾಳಿಗೆ ಹಳ್ಳಿ ನಿವಾಸಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಶ್ವತ್ ನರಾಯಣ್ ರವರ ಪರಿಚಯ ನನಗೆ 2004 ರಿಂದ ಇರುತ್ತದೆ. ಅವರು ಜಮೀನುಗಳನ್ನು ಬೇರೆಯವರಿಗೆ ಕೊಡಿಸುತ್ತಿದ್ದರು

ಹಾಗೂ ಅವರ ಸ್ವಂತ ಜಮೀನನ್ನು ಸಹ ನನಗೆ ಮಾರಾಟ ಮಾಡಿರುತ್ತಾರೆ. ನಾನು ಎಂಬರಹಳ್ಳಿ ಬಳಿ ಕೆಲವು ಎಕರೆ ಜಮೀನುಗಳನ್ನು ಖರೀದಿಸಿರುತ್ತೇನೆ. ಸದರಿ ಹಳ್ಳಿ ಹಾಗೂ ಆಸುಪಾಸಿನಲ್ಲಿ ಈವತ್ತಿನವರೆಗೆ ಸುಮಾರು 20 ಎಕರೆ ಜಮೀನನ್ನು ನಾನು ಖರೀದಿಸಿರುತ್ತೇನೆ. ಸರಿದ ಜಮೀನನ್ನು ನನಗೆ ಅಶ್ವತ್ ನರಾಯಣ್ ಅವರು ಕೊಡಿಸಿರುತ್ತಾರೆ ಎಂದರೆ ಬೇರೆ ಬೇರೆ ವ್ಯಕ್ತಿಗಳು ಕೊಡಿಸಿರುತ್ತಾರೆ ಎಂದು ನುಡಿಯುತ್ತೇನೆ. ಅಶ್ವತ್ ನರಾಯಣ್ ಅವರು ನನಗೆ ಸುಮಾರು 10 ಎಕರೆ ಜಮೀನನ್ನು ಕೊಡಿಸಿರುತ್ತಾರೆ. ಅವರು ಸುಮಾರು 10-12 ಕ್ರಯಪತ್ರಗಳಿಗೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಇರಬಹುದು. ನಮ್ಮ ಕಛೇರಿಯಲ್ಲಿ ಸದರಿ ಅಶ್ವತ್ ನರಾಯಣ್ ಅವರುನ್ನು ಪರ್ಸನಲ್ ಏಜೆಂಟ್ ತರಹ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ.

**3)** ಮುನಿರಾಜು ಅವರ ಕಡೆಯಿಂದ ನಾನು ದಾವಾಸ್ವತ್ತಿನ ಹೊರತಾಗಿ ಇನ್ನೊಂದು ಆಸ್ತಿಯನ್ನು ಖರೀದಿಸಿರುತ್ತೇನೆ. ಸದರಿ ಮುನಿರಾಜು ಅವರು ಮೀನುಕುಂಟೆ ಹೊಸೂರು ಅಕ್ಕಪಕ್ಕದಲ್ಲಿ ಆಸ್ತಿಗಳನ್ನು ನನಗೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮುನಿರಾಜು ಅವರು ಸುಮಾರು 20 ವರ್ಷದ ಹಿಂದೆ ಜಮೀನನ್ನು ಕೊಡಿಸಿದ್ದರು, ಎಷ್ಟು ಕೊಡಿಸಿರುತ್ತಾರೆ ಎಂದು ಈಗ ನೆನಪಿಲ್ಲ.

**4)** ನಿ.ಪಿ.1 ರ ಛಾಪಾ ಕಾಗದವನ್ನು ನಾನು ಸ್ವತಃ ಖರೀದಿಸಿರುತ್ತೇನೆ. ನಿ.ಪಿ.1 ನ್ನು ನಾನೇ ಬೆರಳಚ್ಚು ಮಾಡಿಸಿರುತ್ತೇನೆ. ಸಾಕ್ಷಿಯು ಮುಂದುವರಿದು ನಮಗೆ ಮಾರಾಟ ಮಾಡಿದ ವ್ಯಕ್ತಿಗಳಿಗೆ ಡ್ರಾಫ್ಟ್ ನೀಡಿದ್ದು, ಅವರು ನಿ.ಪಿ.1 ನ್ನು ತಯಾರಿಸಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರಶ್ನೆಃ ನಿ.ಪಿ.1 ನ್ನು ಎಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ?

ಉತ್ತರಃ ನಮ್ಮ ಕಛೇರಿಯಲ್ಲಿ ಬೆರಳಚ್ಚು ಮಾಡಿಸಿರುತ್ತೇವೆ.

**5)** ನಿ.ಪಿ.1 ನ್ನು ತಯಾರಿಸಲು ನಾನು ಸ್ವತಃ ಡಿಕ್ಟೇಶನ್ ನೀಡಿರುತ್ತೇನೆ. ನಮ್ಮ ವಕೀಲರ ಮೂಲಕ ಡ್ರಾಫ್ಟ್ ಮಾಡಿಸಿ ನಮ್ಮ ಕಛೇರಿಯಲ್ಲಿ ಸ್ವತಃ ನಿ.ಪಿ.1 ನ್ನು ಬೆರಳಚ್ಚು ಮಾಡಿಸಿರುತ್ತೇವೆ. ನಮ್ಮ ವಕೀಲರ ಹೆಸರು ವೈ.ಎನ್. ಸತ್ಯನಾರಾಯಣ್ ರಾವ್ ಆಗಿರುತ್ತದೆ. ಸದರಿ ವಕೀಲರ ಕಛೇರಿ ವಿ.ವಿ.ಪುರಂ ನಲ್ಲಿ ಇರುತ್ತದೆ ಎಂದರೆ ಸರಿ. ನಿ.ಪಿ.1 ರ ಡ್ರಾಫ್ಟ್ ಅನ್ನು ಸದರಿ ವಕೀಲರು ತಯಾರಿಸಿರುತ್ತಾರೆ ಎಂದು ಕರಾರುಪತ್ರದಲ್ಲಿ ನಮೂದು ಇಲ್ಲ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳು ಅವಿದ್ಯಾವಂತರು ಎಂದರೆ ಸರಿಯಲ್ಲ. ಅವರಿಗೆ ಓದಲು ಬರೆಯಲು ಸುಮಾರಾಗಿ ಬರುತ್ತಿತ್ತು. 1 ನೇ ಪ್ರತಿವಾದಿ ಅವರ ಹೆಬ್ಬೆರಳ ಗುರುತನ್ನು ಹಾಕಿರುತ್ತಾರೆ. 2 ನೇ ಪ್ರತಿವಾದಿ ಸಹಿ ಮಾಡಿರಬಹುದು. 1 ಮತ್ತು 2 ನೇ ಪ್ರತಿವಾದಿಗಳು ಎಷ್ಟು ಓದಿದ್ದಾರೆ ಎಂದು ನನಗೆ ಗೊತ್ತಿಲ್ಲ. ತಮಗೆ ಓದಲು ಬರೆಯಲು ಬರುತ್ತದೆ ಎಂದು 1 ಮತ್ತು 2 ನೇ ಪ್ರತಿವಾದಿಗಳೇ ನನಗೆ ತಿಳಿಸಿದ್ದರು. 1 ಮತ್ತು 2 ನೇ ಪ್ರತಿವಾದಿಗಳು ಅವಿದ್ಯಾವಂತರು ಎಂಬ ವಿಚಾರ ಗೊತ್ತಿದ್ದೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿಸುವ ಪೂರ್ವದಲ್ಲಿ ದಾವಾ ಸ್ವತ್ತಿನ ಕೆಲವು ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಸದರಿ ಸ್ವತ್ತಿನ ಹಳೆಯ ಪಹಣಿ ಪತ್ರಿಕೆ, ಮ್ಯುಟೇಶನ್ ಹಾಗೂ ಋಣಭಾರ ಪ್ರಮಾಣ ಪತ್ರಗಳನ್ನು ಪರಿಶೀಲಿಸಿರುತ್ತೇನೆ. ನನಗೆ ನೆನಪಿರುವ ಹಾಗೆ ಪ್ರತಿವಾದಿಗಳಿಗೆ ದಾವಾ ಸ್ವತ್ತು ಪಿತ್ರಾರ್ಜಿತವಾಗಿ ಬಂದಿರುತ್ತದೆ. ಕರಾರು ಪತ್ರದ ಪ್ರಕಾರ ಎರಡು ತಿಂಗಳ ಒಳಗೆ ಕ್ರಯಪತ್ರ ಮಾಡಿಕೊಡಬೇಕಿತ್ತು. ಪ್ರತಿವಾದಿಗಳು ಹಳೆಯ ದಾಖಲೆಗಳನ್ನು ನೀಡಿದ್ದು, ಹೊಸ ಕಂದಾಯ ಹಾಗೂ ಸರ್ವೆ ದಾಖಲೆಗಳನ್ನು ನೀಡಬೇಕಿತ್ತು. ನಾನು ಯಾವ್ಯಾವ ದಾಖಲೆಗಳು ಬೇಕು ಎಂದು ಪಟ್ಟಿಯನ್ನು ಪ್ರತಿವಾದಿಗಳಿಗೆ ನೀಡಿದ್ದು, ಆ ಬಗ್ಗೆ ನೋಟಿಸು ನೀಡಿರಲಿಲ್ಲ. ನಾನು ನೀಡಿರುವ ಪಟ್ಟಿಯ ಪ್ರಕಾರ ಪ್ರತಿವಾದಿಗಳು ನನಗೆ ದಾಖಲೆಗಳನ್ನು ಒದಗಿಸಲಿಲ್ಲ. ಎರಡು ತಿಂಗಳ ಅವಧಿಯಲ್ಲಿ ಸದರಿ ದಾಖಲೆಗಳನ್ನು ಒದಗಿಸುವಂತೆ ನೋಟೀಸು ಜಾರಿ ಮಾಡಿರುವುದಿಲ್ಲ. ಈ ದಾವೆ ದಾಖಲಿಸುವಾಗ ನಮ್ಮ

ವಕೀಲರಿಗೆ ನಾನು ಸ್ವತಃ ಮಾಹಿತಿ ನೀಡಿರುತ್ತೇನೆ. ನಿ.ಪಿ.1 ರಲ್ಲಿ ಪ್ರತಿವಾದಿಗಳು ನಮಗೆ ಬೇಕಾದ ದಾಖಲೆಗಳನ್ನು ಒದಗಿಸದೇ ಇದ್ದ ಪಕ್ಷದಲ್ಲಿ ಮುಂಗಡ ಹಣವನ್ನು ಮರುಪಾವತಿಸಲು ಬಾಧ್ಯಸ್ಥರಾಗಿರುತ್ತಾರೆ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಷರತ್ತು ನಮ್ಮ ವಿವೇಚನೆಗೆ ಒಳಪಟ್ಟಿರುತ್ತದೆ. ನಿ.ಪಿ.1 ರ ಲ್ಲಿ AIDE MEMORIE ಎಂದು ತಲೆಬರಹ ಇರುತ್ತದೆ ಎಂದರೆ ನಮ್ಮ ವಕೀಲರು ಹಾಗೆ ನಮೂದಿಸಿರುತ್ತಾರೆ ಎಂದು ನುಡಿಯುತ್ತೇನೆ. AIDE MEMORIE ಎಂದರೆ ನಾನು ಪಾವತಿಸಿದ ಹಣದ ಬಗ್ಗೆ ಪುಸ್ತಕದಲ್ಲಿ ನಮೂದು ಮಾಡಿಕೊಳ್ಳುವುದು ಎಂದರೆ ಸರಿಯಲ್ಲ. ನಿ.ಪಿ.1 ನ್ನು ಬೆರಳಚ್ಚು ಮಾಡಲು ಸುವಾರು ಅರ್ಧ ಗಂಟೆ ಸಮಯ ತೆಗೆದುಕೊಂಡಿರಬಹುದು. ನಿ.ಪಿ.1 ನ್ನು ತಯಾರಿಸುವಾಗ ಸಾಕ್ಷಿದಾರರು ಹಾಗೂ ಮಾರಾಟಗಾರರು ಇದ್ದರು. ಆ ಸಮಯದಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ನಮ್ಮ ಕಛೇರಿಗೂ ಬಂದಿರಲಿಲ್ಲ ಹಾಗೂ ಅವರು ನನ್ನನ್ನು ನೋಡಲು ಇಲ್ಲ ಎಂದರೆ ಸರಿಯಲ್ಲ. ನಾನು ಮಾಡಿಕೊಂಡ ಕರಾರು ಪತ್ರ ಪತ್ರಗಳಲ್ಲಿ ಬೇರೆ ಬೇರೆ ದಾಖಲೆಗಳಲ್ಲಿ ಮುಂಗಡ ಹಣವನ್ನು ಬೇರೆ ಬೇರೆ ರೇಶಿಯೋದಲ್ಲಿ ಪಾವತಿಸಿರುತ್ತೇನೆ. ನಿ.ಪಿ.1 ರಲ್ಲಿ ಕ್ರಯದ ಮೊಬಲಗನ್ನು 6,84,000/- ರೂಪಾಯಿ ಎಂದು ತೋರಿಸಲಾಗಿದೆ. ನನ್ನ ಪ್ರಕಾರ ನಾನು 26,000/- ರೂಪಾಯಿ ಮುಂಗಡ ಹಣವನ್ನು ಪಾವತಿಸಿರುತ್ತೇನೆ. ಸದರಿ ಮುಂಗಡ ಹಣ ಕ್ರಯದ ಮೊಬಲಗಿನ ನಾಲ್ಕೂವರೆ ಪರ್ಸೆಂಟ್ ಆಗಿರುತ್ತದೆ ಎಂದರೆ ಇರಬಹುದು.

**6)** 1 ಮತ್ತು 2 ನೇ ಪ್ರತಿವಾದಿಗಳು ಹಾಗೂ ಸಾಕ್ಷಿದಾರರು ಮುನಿರಾಜು ಒಂದೇ ಊರಿನವರು ಎಂದರೆ ಸರಿ. ಪ್ರತಿವಾದಿಗಳು ಸದರಿ ಮುನಿರಾಜು ಬಳಿ 25,000/- ರೂಪಾಯಿ ಸಾಲ ಕೇಳಿದ್ದು, ಸದರಿ ಮನಿರಾಜು ತನ್ನ ಸ್ನೇಹಿತ ಅಶ್ವತ್ ನಾರಾಯಣ್ ಅವರಿಂದ ಪಡೆದು ಕೊಡುತ್ತೇನೆ ಎಂದು ಹೇಳಿ ಸದರಿ ಹಣವನ್ನು ಪ್ರತಿವಾದಿಗಳಿಗೆ ಪಾವತಿಸಿ ಆ ಸಮಯದಲ್ಲಿ ಪ್ರತಿವಾದಿಗಳ ಹೆಬ್ಬೆರಳ ಗುರುತು ಮತ್ತು

ಸಹಿಗಳನ್ನು ದಾಖಲೆ ಮೇಲೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸುನಿಲ್ ಭಾಟಿಯ ಎಂದರೆ ನನ್ನ ಸಹೋದರ. ದಾವಾಸ್ವತ್ತಿಗೆ ಲಗತ್ತಾಗಿ ಉತ್ತರದ ಕಡೆ ನನ್ನ ಸಹೋದರನ ಆಸ್ತಿ ಇದೆ ಎಂದರೆ ಸರಿ. ಆ ಕಾರಣದಿಂದ ದಾವಾಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನಿ.ಪಿ.1 ನ್ನು ಕರಾರನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಪ್ರತಿವಾದಿಗಳು ದಾವಾ ಸ್ವತ್ತನ್ನು ಮಾರಾಟ ಮಾಡಲು ಬಯಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನಗೆ ಪ್ರತಿವಾದಿಗಳು ಯಾವುದೇ ಕ್ರಯದ ಕರಾರು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಒಂದು ಸಾವಿರ ರೂಪಾಯಿ ನಗದು ಹಾಗೂ ಇಪ್ಪತ್ತೈದು ಸಾವಿರ ರೂಪಾಯಿ ಚೆಕ್ ಮುಖಾಂತರ ಪಾವತಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳು ಮುನಿರಾಜು ಅವರನ್ನು ಸಾಲ ನೀಡುವಂತೆ ಕೇಳಿದ ಸಂದರ್ಭದಲ್ಲಿ ಇಪ್ಪತ್ತೈದು ಸಾವಿರ ರೂಪಾಯಿ ಚೆಕ್ ಅನ್ನು ನಾನು ಮುನಿರಾಜು ಅವರ ಮುಖಾಂತರ ಕೊಟ್ಟು ನಿ.ಪಿ.1 ನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**7)** ಪ್ರತಿವಾದಿಗಳು ಅದೇ ಊರಿನ ಮಹೇಶ್ ಎನ್ನುವವರಿಗೆ ದಿ.24-07-1996 ರಂದು ದಾವಾಸತ್ತಿಗೆ ಸಂಬಂಧಿಸಿದಂತೆ ಕರಾರುಪತ್ರವನ್ನು ಮಾಡಿಕೊಟ್ಟಿದ್ದರು ಎಂದರೆ ಅದು ಸೃಷ್ಟಿಸಿದ ದಾಖಲೆ ಎಂದು ನುಡಿಯುತ್ತೇನೆ. ಸದರಿ ಮಹೇಶ್ ಅವರು ಬಾಕಿ ಕ್ರಯದ ಮೊಬಲಗನ್ನು ಪಾವತಿಸದೇ ಇರುವುದರಿಂದ 1 ಮತ್ತು 2 ನೇ ಪ್ರತಿವಾದಿಗಳು ಹಾಗೂ ಸದರಿ ಮಹೇಶ್ ಸೇರಿ 3 ನೇ ಪ್ರತಿವಾದಿಗೆ ಕ್ರಯದ ಕರಾರನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯದ ಕರಾರನ್ನು 7 ಲಕ್ಷ ರೂಪಾಯಿಗಳಿಗೆ ಮಾಡಿಕೊಳ್ಳಲಾಗಿದ್ದು ನನಗೆ ಆ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರಿನ ಪ್ರಕಾರ 1 ಮತ್ತು 2 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಗೆ ದಿ.01-10-2004 ರಂದು ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಇರಬಹುದು. ಕ್ರಯದ ಕರಾರನ್ನು ಮಾಡಿಕೊಳ್ಳುವ ಪೂರ್ವದಲ್ಲಿ ನಾನು ಯಾವುದೇ

ಸಾರ್ವಜನಿಕ ಪ್ರಕಟಣೆಯನ್ನು ತೆಗೆದುಕೊಂಡಿರುವುದಿಲ್ಲ. ಕ್ರಯದ ಕರಾರಿನ ಪ್ರಕಾರ ಎರಡು ತಿಂಗಳ ಒಳಗೆ ಕ್ರಯಪತ್ರ ಮಾಡಿಕೊಡಬೇಕು ಎಂದು ಇದೆ ಎಂರದೆ ದಾಖಲೆಗಳನ್ನು ಒದಗಿಸಿದ ಪಕ್ಷದಲ್ಲಿ ಮಾಡಿಕೊಡಬೇಕು ಎಂದು ಇದೆ ಎಂದು ನುಡಿಯುತ್ತೇನೆ. ಸದರಿ ಎರಡು ತಿಂಗಳು ಮುಗಿದ ತಕ್ಷಣ ನಾನು ನೋಟೀಸು ಜಾರಿ ಮಾಡಿರುತ್ತೇನೆ. ಸದರಿ ನೋಟೀಸು ನಿ.ಪಿ.2 ಆಗಿರುತ್ತದೆ. ಅದರ ದಿ.27-10-2004 ಆಗಿರುತ್ತದೆ. 3 ನೇ ಪ್ರತಿವಾದಿ ದಾವಾಸ್ವತ್ತನ್ನು ಖರೀದಿಸಿದ ನಂತರ ನಾನು ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಕ್ರಯಪತ್ರದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತೇನೆ. ನಿ.ಪಿ.2 ನ್ನು ಜಾರಿ ಮಾಡಿದ ತಕ್ಷಣ ದಾವೆ ದಾಖಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ದಿ.27-10-2004 ರಂದು ನೊಟೀಸನ್ನು ಜಾರಿ ಮಾಡಿದ್ದು ಎಂಟು ತಿಂಗಳ ನಂತರ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಮೇ 2005 ರಲ್ಲಿ ದಾವಾ ಸ್ವತ್ತನ್ನು ಕ್ರಯ ಮಾಡಿದ ಬಗ್ಗೆ ನನಗೆ ಗೊತ್ತಾಯಿತು ಎಂದು ನುಡಿಯುತ್ತೇನೆ. 3 ನೇ ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿಸಿದ ನಂತರ ನಾನು, ಮುನಿರಾಜು ಹಾಗೂ ಅಶ್ವತ್ ನಾರಾಯಣ್ ಸೇರಿ ಕ್ರಯದ ಕರಾರನ್ನು ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**8)** 4 ನೇ ಪ್ರತಿವಾದಿಗೆ ಸೇರಿದ ಜಮೀನು ಸರ್ವೆ ಸಂಖ್ಯೆ 6-8 ವಿಸ್ತೀರ್ಣ 5 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತು 3 ನೇ ಪ್ರತಿವಾದಿಯ ಮನೆಗೆ ಲಗತ್ತಾಗಿ ಇರುವ ಜಮೀನು ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತು 4 ನೇ ಪ್ರತಿವಾದಿಯ ಸರ್ವೆ ಸಂಖ್ಯೆ 6-2 ಮತ್ತು 6-4 ಕ್ಕೆ ಲಗತ್ತಾಗಿರುವ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ 3 ನೇ ಪ್ರತಿವಾದಿ ಮತ್ತು 4 ನೇ ಪ್ರತಿವಾದಿ ವಿನಿಮಯ ಪತ್ರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ 1 ಮತ್ತ 2 ನೇ ಪ್ರತಿವಾದಿಗಳಿಂದ ದಾವಾಸ್ವತ್ತುಗಳನ್ನು ಖರೀದಿಸಿದ್ದು ಅವರು ಬೋನಫೈಡೇ ಪರ್ಚೇಸರ್ ಎಂದರೆ ಸರಿಯಲ್ಲ. ನಿ.ಪಿ.1 ನ್ನು ನಮ್ಮ ಏಜೆಂಟ ಗಳಾದ ಮುನಿರಾಜು ಮತ್ತು ಅಶ್ವತ್

ನಾರಾಯಣ್ ಅವರ ಜೊತೆ ಶಾಮೀಲಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ಯಾವುದೇ ಮುಂಗಡ ಹಣವನ್ನು ನೀಡಿರುವುದಿಲ್ಲ ಹಾಗೂ ಸದರಿ ಹಣವನ್ನು ಪಡೆದು ಪ್ರತಿವಾದಿಗಳು ಯಾವುದೇ ಕರಾರುಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**